# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

## ಸಿ.ಸಿ. ನಂಃ 419/2019

ಸಿ.ಡಬ್ಲೂಃ 11 ಪಿಡಬ್ಲೂಃ 04

| | |
|---|---|
| ಸಾಕ್ಷಿದಾರರ ಹೆಸರುಃ | ರಾಮಣ್ಣ ನಾಯ್ಕ ತಂದೆಃ ರಾಮಚಂದ್ರ ನಾಯ್ಕ |
| ವಯಸ್ಸುಃ | 65 ವರ್ಷ |
| ಉದ್ಯೋಗಃ | ನಿವೃತ್ತ ಪಿ.ಎಸ್.ಐ. |
| ಸಾಕೀನಃ | ಕೊಪ್ಪಳ. |

ದಿಃ **10-03-2026** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

ನಾನು ದಿಃ**19-04-2017** ರಿಂದ **21-09-2018** ರವೆರೆಗೆ ನಾನು ಹಿರೇ ಹಡಗಲಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕೆಲಸ ಮಾಡಿರುತ್ತೇನೆ.

**02.** ಸದರಿ ಪ್ರಕರಣದಲ್ಲಿ ದಿಃ **04-07-2017** ರಂದು ನಾನು ಮಧ್ಯಾಹ್ನ **03.00** ಗಂಟೆಗೆ ನಮ್ಮ ಠಾಣೆಯ ಉಪಠಾಣೆ ಹೊಳಲು ಗ್ರಾಮದಲ್ಲಿದ್ದಾಗ ಹೊಳಲು ಗ್ರಾಮದ ಗೋಣಿಬಸವೇಶ್ವರ ದೇವಸ್ಥಾನದ ಹತ್ತಿರ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದಿರುತ್ತದೆ. ನಾನು ಕೂಡಲೇ ಚಾ.ಸಾ.**01** ರಿಂದ **06** ರವರನ್ನು ಕರೆದು ಅವರಿಗೆ ಮಾಹಿತಿಯನ್ನು ತಿಳಿಸಿ ಚಾ.ಸಾ.**02** ರವರಿಗೆ ದಾಳಿಗೆ ಹೋಗಲು ಇಬ್ಬರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿದ್ದು ಅದರಂತೆ ಚಾ.ಸಾ.**02** ರವರು ಚಾ.ಸಾ.**07** ಮತ್ತು **08** ರವರನ್ನು ಕರೆದುಕೂಂಡು ಬಂದು ನನ್ನ ಮುಂದೆ ಹಾಜರುಪಡೆಸಿರುತ್ತಾರೆ. ಆಗ ನನಗೆ ಬಂದ ಮಾಹಿತಿಯನ್ನು ಪಂಚರಿಗೂ ತಿಳಿಸಿ ಪಂಚರಾಗಿ ಸಹಕರಿಸಬೇಕು ಎಂದು ಕೇಳಿಕೊಂಡ ಮೇರೆಗೆ ಅವರು ಒಪ್ಪಿದ್ದರಿಂದ ನಾನು ಮತ್ತು ನಮ್ಮ ಸಿಬ್ಬಂದಿಗಳಾದ ಚಾ.ಸಾ.**01** ರಿಂದ **06** ರವರು ಹಾಗೂ ಪಂಚರು ಸೇರಿ ನಮ್ಮ ಇಲಾಖಾ ವಾಹನದಲಿ ಮಧ್ಯಾಹ್ನ **03.10** ಗಂಟೆಗೆ ಠಾಣೆಯಿಂದ ಹೊರಟು **03.20** ಗಂಟೆಗೆ ನಮಗೆ ಮಾಹಿತಿ ಬಂದ ಸ್ಥಳ ಹೊಳಲು ಗ್ರಾಮದ ಗೋಣಿಬಸವೇಶ್ವರ ದೇವಸ್ಥಾನದ ಹತ್ತಿರ ಹೋಗಿರುತ್ತೇವೆ ಸದರಿ ಸ್ಥಳದಲ್ಲಿ ನಮ್ಮ ವಾಹನವನ್ನು ನಿಲ್ಲಿಸಿ ಮರೆಮಾಚಿ ನೋಡಲಾಗಿ ದೇವಸ್ಥಾನದ ಮುಂದೆ ಒಬ್ಬ ವ್ಯಕ್ತಿ ಒಂದು ರಟ್ಟಿನ ಡಬ್ಬಿಯಲ್ಲಿ ಮದ್ಯ ಮಾರಾಟ ಮಾಡುತ್ತಿರುವುದನ್ನು ಖಚಿತ ಪಡೆಸಿಕೊಂಡು ಆತನ ಮೇಲೆ ದಾಳಿ ಮಾಡಲಾಗಿ ಆತನ ಹೆಸರು ಗುಜ್ಜಾರ ಸತೀಶ ತಂದೆ ಪಾಡುರಂಗ ಸಾಃ ಹೊಳಲು ಎಂದು ತಿಳಿದುಕೊಂಡು ಆತನಿಗೆ ಮದ್ಯಮಾರಟ ಮಾಡಲು ಪರವಾನಿಗೆ ಕೇಳಲಾಗಿ ಆತನು ಯಾವುದೇ ಪರವಾನಿಗೆ ಇಲ್ಲ

ಎಂದು ತಿಳಿಸಿದ್ದರಿಂದ ಆತನ ಬಳಿ ಇದ್ದ ರಟ್ಟಿನ ಪೆಟ್ಟಿಗೆಯನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಅದರಲ್ಲಿ **180** ಎಮ್.ಎಲ್.ನ ಕೊಡ್ಯಾಸ **XXX** ರಮ್ಮನ **12** ಪೌಚಗಳು ಮತ್ತು **180** ಎಮ್.ಎಲ್.ನ ನಂಬರ **01** ಹೈವರ್ಸ ವಿಸ್ಕೀಯ **10** ಗಾಜಿನ ಬಾಟಲಗಳು ದೊರೆತಿರುತ್ತವೆ ಮತ್ತು ಆತನಿಗೆ ಅಂಗಶೋಧನೆ ಮಾಡಲಾಗಿ ಆತನ ಬಳಿ **1590/-** ನಗದು ಹಣ ಸಿಕ್ಕಿರುತ್ತದೆ. ಸದರಿ ಹಣದ ಬಗ್ಗೆ ವಿಚಾರಿಸಲಾಗಿ ಆತನು ಮಧ್ಯ ಮಾರಾಟ ಮಾಡಿದ್ದರಿಂದ ಬಂದ ಹಣ ಎಂದು ತಿಳಿಸಿದ್ದರಿಂದ ಆತನ ಬಳಿ ದೊರೆತಿದ್ದ ಮಧ್ಯ ಮತ್ತು ಹಣವನ್ನು ಪಂಚರ ಸಮಕ್ಷಮ ಅಮಾನತ್ತು ಪಡೆಸಿಕೊಂಡು ಮಧ್ಯಾಹ್ನ. **03.30** ರಿಂದ **04.40** ಗಂಟೆಯವರೆಗೆ ಪಂಚರ ಸಮಕ್ಷಮ ಸ್ಥಳದಲ್ಲಿಯೇ ಪಂಚನಾಮೆ ಜರೂಗಿಸಿ, ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇವೆ ಹಾಗೂ ಮಧ್ಯವನ್ನು **SHO** ಅಂತ ಸೀಲು ಮಾಡಿ ರಟ್ಟಿನ ಬಾಕ್ಸನಲ್ಲಿ ಹಾಕಿ ನಮ್ಮ ವಶಕ್ಕೆ ಪಡೆದು ನನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ನಂತರ ಆರೋಪಿ ಮಧ್ಯದ ಪೌಚ ಮತ್ತು ಬಾಟಲಗಳು ನಗದು ಹಣದೊಂದಿಗೆ ಠಾಣೆಗೆ ವಾಪಸ್ಸು ಬಂದು ಆರೋಪಿತನ ವಿರುದ್ಧ ಚಾ.ಸಾ.**10** ರವರಿಗೆ ಬಂದು ದೂರು ದಾಖಲಿಸಿರುತ್ತೇನೆ. ಸಾಕ್ಷಿಯು ನಿ.ಪಿ.**01** ರ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.**01** ಬಿ. ಎಂದು ಗುರುತಿಸಲಾಯಿತು. ಸಾಕ್ಷಿಯು ನಿ.ಪಿ.**03** ರ ದೂರನ್ನು ನೋಡಿ ಗುರುತಿಸಿದ್ದರಿಂದ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.**03** ಬಿ. ಎಂದು ಗುರುತಿಸಲಾಯಿತು. ಸಾಕ್ಷಿಯು ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.**04** ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.**04** ಎ. ಎಂದು ಗುರುತಿಸಲಾಯಿತು. **FSL** ವರದಿಯಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದರಿಂದ **FSL** ವರದಿಯನ್ನು ನಿ.ಪಿ.**05** ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.**05** ಎ. ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮು.ಮಾ.**01** ರಿಂದ **19** ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಆರೋಪಿತನನ್ನು ನೋಡಿದರೆ ಗುರುತಿಸಬಲ್ಲೆ ಎಂದು ನುಡಿದಿದ್ದು, ಇಂದು ನ್ಯಾಯಾಲಯದ ಮುಂದೆ ಗೈರು ಹಾಜರು ಇದ್ದು ಆರೋಪಿ ಪರ ವಕೀಲರು ಗೈರು ಹಾಜರು ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿ ಆತನನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ.**KK** ವಕೀಲರಿಂದಃ

**03.** ಈ ಪ್ರಕರಣದ ಮಾಹಿತಿಯನ್ನು ಠಾಣಾ ವಹಿಯಲ್ಲಿ ನಮೂದು ಮಾಡಿರುವುದಿಲ್ಲ. ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ನಮ್ಮ ಠಾಣಾ ವಹಿ ಹಿರೇಹಡಗಲಿ ಠಾಣೆಯಲ್ಲಿ ಇರುತ್ತದೆ. ನಾನು ಅಲ್ಲಿಂದ ಫೋನ ಕರೆ ಮುಖಾಂತರ ಠಾಣಾ ವಹಿಯಲ್ಲಿ ನಮೂದು ಮಾಡಿಸಿರುವುದಿಲ್ಲ. ಹೊಳಲು ಉಪಠಾಣೆಯಿಂದ ಗೋಣಿಬಸವೇಶ್ವರ ದೇವಸ್ಥಾನ ಅರ್ಧದಿಂದ 1 ಕಿಲೋಮೀಟರ ಆಗುತ್ತದೆ. ನಮ್ಮ ಉಪಠಾಣೆಯಿಂದ ಗೋಣಿಬಸವೇಶ್ವರ ದೇವಸ್ಥಾನ ಉತ್ತರ ದಿಕ್ಕಿಗೆ ಇರುತ್ತದೆ.

**04.** ಆ ದಿನ ಪಂಚರನ್ನು ಒಳಗೊಂಡು ನಾವು ಒಟ್ಟು **07** ಜನ ದಾಳಿ ಮಾಡಲು ಹೋಗಿರುತ್ತೇವೆ. ನಾವು ಸರ್ಕಾರಿ ವಾಹನದಲ್ಲಿ ಹೋಗಿರುತ್ತೇವೆ ವಾಹನದ ಸಂಖ್ಯೆ ನೆನಪು ಇರುವುದಿಲ್ಲ. ಗೋಣಿಬಸವೇಶ್ವರ ದೇವಸ್ಥಾನ ಪಶ್ಚಿಮ ದಿಕ್ಕಿಗೆ **15** ರಿಂದ **20** ಮೀಟರ ದೂರದಲ್ಲಿ ವಾಹನವನ್ನು ನಿಲ್ಲಿಸಿರುತ್ತೇವೆ. ಪಂಚನಾಮೆಯಲ್ಲಿ ಗುನ್ನೇ ಸಂಖ್ಯೆ ಬರೆದಿರುವುದಿಲ್ಲ. ಪಂಚನಾಮೆಗೆ ಒಟ್ಟು **3** ಜನ ಮತ್ತು ಬರೆದವರು ಚಾಸಾ.**5** ರವರು ಸಹಿ ಮಾಡಿರುತ್ತೇವೆ. ನಾವು ಜಪ್ತು ಮಾಡಿಕೊಂಡಂತಹ ಹಣ ಎಷ್ಟು ಮುಖಬೆಲೆಯ ನೋಟುಗಳು ಎಂದು ಹೇಳಲು ಆಗುವುದಿಲ್ಲ. ಒಟ್ಟು ಎಷ್ಟು ನೋಟುಗಳು ಇದ್ದವು ಎಂದರೆ ನನಗೆ ಹೇಳಲು ಆಗುವುದಿಲ್ಲ. ದಾಳಿ ಮಾಡುವ ಸಮಯದಲ್ಲಿ ಛಾಯಾ ಚಿತ್ರಗಳನ್ನು ತೆಗೆದಿರುವುದಿಲ್ಲ. ಆಗ ನಮ್ಮ ಹತ್ತಿರ ಮೊಬೈಲಗಳು ಇದ್ದವು. ಫೊಟೋ ತೆಗೆಯಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ.

**05.** ದೂರನ್ನು ಚಾ.ಸಾ.**05** ರವರು ಘಣಕೀಕರಣ ಮಾಡಿರುತ್ತಾರೆ. ದೂರಿನಲ್ಲಿ ಚಾ.ಸಾ.**05** ರವರು ಘಣಕೀಕರಣ ಮಾಡಿರುತ್ತಾರೆ ಎಂದು ಬರೆದಿರುವುದಿಲ್ಲ. ಕಚ್ಚಾ ನಕಾಶೆಯನ್ನು ಚಾ.ಸಾ.**05** ರವರು ತಯಾರಿಸಿರುತ್ತಾರೆ. ನಾನು ಮತ್ತು ಸಿಬ್ಬಂದಿಯವರು ಮತ್ತು ಪಂಚರು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ, ಅಲ್ಲಿ ಆರೋಪಿ ಇರಲಿಲ್ಲ, ನಾವು ಹೇಳಿದ ಹಾಗೆ ಯಾವುದೇ ಘಟನೆ ಅಲ್ಲಿ ಆಗಿರುವುದಿಲ್ಲ, ಯಾವುದೇ ಪಂಚನಾಮೆ ಮಾಡಿರುವುದಿಲ್ಲ, ಪಂಚರ ಸಹಿಯನ್ನು ಪಡೆದಿರುವುದಿಲ್ಲ, ಏನನ್ನೂ ಜಪ್ತು ಮಾಡಿರುವುದಿಲ್ಲ, ಕಚ್ಚಾ ನಕಾಶೆ ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ಅಂಕಿಸಂಖ್ಯೇಗೋಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

" ನನ್ನ ಸಮಕ್ಷಮ "

**Sd/-**

(ಶ್ರೀಮತಿ.ಅಕ್ಷತಾ ಟಿ .)

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು., ಹಡಗಲಿ.